ಈ) 04.07.2003ರಂದು ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು. ನಿರ್ದೇಶಕರ ಮಂಡಳಿಯು ವ್ಯವಸ್ಥಾಪಕ ನಿರ್ದೇಶಕರಿಗೆ ಅತಿ ಹೆಚ್ಚು ಬಂಡವಾಳ ಹೂಡಿರುವ ಖಾಸಗಿ ಬಂಡವಾಳದಾರರಾದ ಮೆಃಸಹರಾ ಇಂಡಿಯ, ಬಾಂಬೆ ಇವರನ್ನು ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳಲು ಅಧಿಕಾರ ನೀಡಲಾಯಿತು. ಅದರಂತೆ ವ್ಯವಸ್ಥಾಪಕ ನಿರ್ದೇಶಕರು ಕ್ರಮ ವಹಿಸಲಿದ್ದಾರೆ.

ಉ) ಈ ಮೇಲಿನ ಕ್ರಮಗಳನ್ನು ವಹಿಸಿದ ನಂತರ ಕಾಮಗಾರಿಯು ಮತ್ತು ಇತರ ಕೆಲಸಗಳು ಮುಗಿದು ಕೋ–ಜನರೇಷನ್ ಘಟಕವನ್ನು ನವೆಂಬರ್:ಡಿಸೆಂಬರ್ 2003ರ ತಿಂಗಳಿನಲ್ಲಿ ಪ್ರಾರಂಭಿಸುವ ಸಾಧ್ಯತೆ ಇರುತ್ತದೆ.

ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಹಾಯಧನ ಪಾವತಿ ಬಗ್ಗೆ

2267 (2785) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಪಾವತಿ ಮಾಡಬೇಕಾಗಿರುವ ಸಹಾಯ ಧನವೆಷ್ಟು;

ಆ) ಈ ಸಹಾಯ ಧನವನ್ನು ಬಿಡುಗಡೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಅದರ ವಿವರ ನೀಡುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ದಿನಾಂಕ: 31.3.03ರ ಅಂತ್ಯಕ್ಕೆ 18279 ಸಣ್ಣ ಕೈಗಾರಿಕಾ ಘಟಕಗಳಿಗೆ ರೂ. 405.67 ಕೋಟಿ ರೂ.ಗಳ ಸಹಾಯ ಧನವನ್ನು ಪಾವತಿ ಮಾಡಬೇಕಾಗಿರುತ್ತದೆ.

ಆ) ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಒದಗಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ರೂ. 12.56 ಕೋಟಿ ಲಭ್ಯವಿದೆ. ಹೆಚ್ಚುವರಿ ಸಂಪನ್ಮೂಲವನ್ನು ಬಾಂಡ್‌ಗಳನ್ನು ಹೊರಡಿಸುವ ಮೂಲಕ ಅಥವಾ ಇತರ ರೂಪದಲ್ಲಿ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕೆ.ಆರ್. ನಗರ ತಾಲ್ಲೂಕು ಚುಂಚನ ಕಟ್ಟೆ ಹೋಬಳಿಯ ತಾಂತ್ರಿಕ ಸೇವಾ ಕೇಂದ್ರಕ್ಕೆ ಹೆಚ್ಚಿನ ಸಿಬ್ಬಂದಿ ಒದಗಿಸುವ ಬಗ್ಗೆ

2268 (2754) : ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿ ತಾಂತ್ರಿಕ ಸೇವಾ ಕೇಂದ್ರದಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು);

ಆ) ಈ ಕೇಂದ್ರದ ವ್ಯಾಪ್ತಿಯಲ್ಲಿ ಬರುವಂತೆ ಎಷ್ಟು ಎಕರೆ ರೇಷ್ಮೆ ಕೃಷಿ ಬೆಳೆಯುವಲ್ಲಿ ಪ್ರಗತಿ ಸಾಧಿಸಲಾಗಿದೆ;

ಇ) ಪ್ರಗತಿ ಕಡಿಮೆ ಬಂದಿದ್ದಲ್ಲಿ ಕಡಿಮೆಯಾಗಲು ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಈ) ಸಿಬ್ಬಂದಿಗಳು ಹೆಚ್ಚಾಗಿದ್ದು ಪ್ರಗತಿ ಕಡಿಮೆಯಾಗಿದ್ದು ಹೆಚ್ಚಿರುವ ಸಿಬ್ಬಂದಿಗಳನ್ನು ಕಡಿಮೆ ಇರುವ ಸಿಬ್ಬಂದಿಗಳ ಇಲಾಖೆಗೆ ನಿಯೋಜಿಸಲು ಸರ್ಕಾರದ ನಿಯಮದಲ್ಲಿ ಅವಕಾಶವಿದೆಯೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ಈ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವಿವರ ಈ ಕೆಳಗಿನಂತಿದೆ.

ರೇಷ್ಮೆ ನಿರೀಕ್ಷಕರು	1
ರೇಷ್ಮೆ ಪ್ರದರ್ಶಕರು	1
ರೇಷ್ಮೆ ಪ್ರವರ್ತಕರು	1
ರೇಷ್ಮೆ ಪ್ರವರ್ತಕರು (ಸಂಖ್ಯಾತಿರಿಕ್ತ	6
ದ್ವಿತೀಯ ದರ್ಜೆ ಸಹಾಯಕರು (ಸಂಖ್ಯಾತಿರಿಕ್ತ)	1
ಒಟ್ಟು	**10**

ಆ) 221 ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ವ್ಯವಸಾಯವಿದೆ.

ಇ) ಬರದ ಪರಿಸ್ಥಿತಿಯಿಂದಾಗಿ ಹಿಪ್ಪುನೇರಳೆ ಬೆಳೆಯುವ ಪ್ರದೇಶ ಕಡಿಮೆಯಾಗಿದೆ.

ಈ) ಇದೆ.

ರಾಜ್ಯದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯ ವೈಖರಿ

2269 (2935) : ಶ್ರೀ ಚಂದ್ರಕಾಂತ್ ಬೆಲ್ಲದ್ ಗುರಪ್ಪ (ಧಾರವಾಡ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲಾವಾರು ಗ್ರಾಮಾಂತರ ಹಾಲು ಉತ್ಪಾಕರ ಸಹಕಾರ ಸಂಘಗಳ ಸಂಖ್ಯೆ ಎಷ್ಟು;

ಆ) ಕಳೆದ ಮೂರು ವರ್ಷಗಳಿಂದ ಇವುಗಳಲ್ಲಿ ಲಾಭದಲ್ಲಿರುವ ಹಾಗೂ ನಷ್ಟದಲ್ಲಿರುವ ಸಹಕಾರ ಸಂಘಗಳು ಎಷ್ಟು; (ವಿವರ ನೀಡುವುದು);

ಇ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘದ ಒಕ್ಕೂಟಗಳು ಯಾವುವು?

ಶ್ರೀ ಎಂ. ಮಹದೇವ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟಗಳು ಈ ಕೆಳಕಂಡಂತಿದೆ.

1. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.

2. ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.